


## ಪರೀಕ್ಷಾ ಕೊಠಡಿಯಲ್ಲಿ ಮೂರು ತಾಸು!

# ಯೋಜನೆ ಹೀಗಿರಲಿ...



ನಿರಂಜನ ಆರಾಧ್ಯ
ಶಿಕ್ಷಣ ತಜ್ಞರು

SSLC-PUC

◆ **ರಿವಿಷನ್ ಹೇಗೆ ಮಾಡಿಕೊಳ್ಳಬೇಕು?**

ಇಡೀ ಪಠ್ಯಪುಸ್ತಕವನ್ನು ಪೂರ್ತಿಯಾಗಿ ಓದುವುದು ಒಳ್ಳೆಯದು. ಪರೀಕ್ಷೆ ಹತ್ತಿರವಿದ್ದಾಗ ಇದು ಸಾಧ್ಯವಾಗದಿರಬಹುದು. ಇಂಥ ಸಮಯದಲ್ಲಿ, ಹತ್ತು ಅಧ್ಯಾಯಗಳ ಪೈಕಿ, ಐದಾರು ಪಾಠಗಳನ್ನು ಚೆನ್ನಾಗಿ ಓದಿದರೂ ಸಾಕು. ಪರೀಕ್ಷೆಯಲ್ಲಿ ಸುಲಭವಾಗಿ ಉತ್ತೀರ್ಣವಾಗಬಹುದು. ಹಳೆಯ ಪ್ರಶ್ನೆಪತ್ರಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಯಾವ ಪಾಠದಿಂದ ಹೆಚ್ಚು ಪ್ರಶ್ನೆಗಳು ಬರುತ್ತವೆ ಎಂಬುದು ತಿಳಿಯುತ್ತದೆ. ಯಾವ ಅಧ್ಯಾಯದಿಂದ ಯಾವ ಪ್ರಶ್ನೆಗಳನ್ನು ಪದೇಪದೆ ಕೇಳಲಾಗಿದೆ ಎಂಬುದನ್ನು ತಿಳಿದುಕೊಂಡರೆ ಅಂಥ ಪಾಠಗಳಿಗೆ ಹೆಚ್ಚು ಗಮನ ಕೊಡಲು ಸಾಧ್ಯವಾಗುತ್ತದೆ.

ಪಾಠಗಳನ್ನು ಓದುವಾಗಲೇ ಅದರ ಮುಖ್ಯ ಭಾಗಗಳು, ಉತ್ತರದಲ್ಲಿ ಹೈಲೈಟ್ ಮಾಡಬೇಕಾದ ಅಂಶವನ್ನು ಗುರುತಿಸಿಕೊಂಡು, ಹೈಲೈಟ್ ಅಥವಾ ಅಂಡರ್‌ಲೈನ್ ಮಾಡಿಕೊಳ್ಳಬೇಕು. ಅಭ್ಯಾಸ ಮಾಡುವುದು (ಸ್ಟಡಿ) ಎಂದರೆ ಕೇವಲ ಓದುವುದಷ್ಟೇ ಅಲ್ಲ. ಬರೆಯುವುದರಿಂದಲೂ ಸಾಕಷ್ಟು ಲಾಭವಿದೆ. ಇದನ್ನು ಮರೆಯಬಾರದು.

◆ **ಪರೀಕ್ಷೆಯ ಅವಧಿ ಮೂರು ತಾಸು. ಈ ಸಮಯವನ್ನು ಹೇಗೆ ಪ್ಲಾನ್ ಮಾಡಬೇಕು?**

ಪರೀಕ್ಷೆಯ ಬಗ್ಗೆ ಯಾವುದೇ ಒತ್ತಡ ಇರಿಸಿಕೊಳ್ಳಬೇಡಿ. ಸಮಾಧಾನವಾಗಿ, ಶಾಂತಚಿತ್ತದಿಂದ ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಿ. ಒಂದು ನಿಮಿಷ ಮೌನವಾಗಿ ಕುಳಿತು, ‘ಯಾವುದೇ ಪ್ರಶ್ನೆ ಬಂದರೂ ನಾನು ಎದುರಿಸುತ್ತೇನೆ. ಈ ಸಬ್ಜೆಕ್ಟ್ ಪೂರ್ತಿ ನನಗೆ ತಿಳಿದಿದೆ. ನಾನು ಬರೆಯಬಲ್ಲೆ’ ಎಂದು ಮನಸ್ಸಿನಲ್ಲಿ ನಿಮಗೆ ನೀವೇ ಹೇಳಿಕೊಳ್ಳಿ. ಪ್ರಶ್ನೆಪತ್ರಿಕೆ ಕೈಗೆ ಬಂದ ತಕ್ಷಣ ಉತ್ತರಗಳನ್ನು ಬರೆಯಲು ಶುರುಮಾಡಬೇಡಿ. ಐದು ನಿಮಿಷ ಪ್ರಶ್ನೆಪತ್ರಿಕೆಯನ್ನು ಸಮಾಧಾನವಾಗಿ ಓದಿ, ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳಿ. ಆ ಪ್ರಶ್ನೆ ನನ್ನಿಂದ ಏನು ನಿರೀಕ್ಷಿಸುತ್ತಿದೆ, ಅದಕ್ಕೆ ಎಷ್ಟು ಉತ್ತರ ಬರೆಯಬೇಕು ಎಂದು